International Journal of Academic Research
ISSN: 2348-7666; Vol.8, Issue-12, December, 2021
Impact Factor: 6.023; Email: drtvramana@yahoo.co.in

# ಬಸವಣ್ಣನವರ ಧರ್ಮಬೋಧೆ ಮತ್ತು ಸಮಾಜಿಕ ಸೇವೆ

**ಲೇಖಕರು: ಡಾ. ಅನ್ನಪೂರ್ಣದೇವಿ ಪಾಟೀಲ**
**ಕನ್ನಡ ಸಹಾಯಕ ಪ್ರಾಧ್ಯಾಪಕರು**
**ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು**
**ಕಲಬುರಗಿ–585102 (9449540049)**

12ನೇ ಶತಮಾನದಲ್ಲಿ ಜನ್ಮತಾಳಿದ ಬಸವಣ್ಣನವರು ಸಕಲ ಜನತೆಯ ಸಲುವಾಗಿ ಕೈಗೊಂಡ ಮಹತ್ಕಾರ್ಯಗಳು ಇಂದಿಗೂ ನಿತ್ಯ ನೂತನವಾಗಿದೆ. ಮಾನವನು ಸಮಾಜದ ಘಟಕ. ವ್ಯಕ್ತಿಯನ್ನು ಬಿಟ್ಟು ಸಮಾಜವಿಲ್ಲ, ಒಳ್ಳೆಯ ಸಮಾಜದ ನಿರ್ಮಾಣಕ್ಕೆ ನೈತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ವ್ಯಕ್ತಿ ಬೆಳೆದರೆ ಮಾತ್ರ ಸಾಧ್ಯ ಎನ್ನುವದನ್ನು ಮನಗಂಡ ಬಸವಣ್ಣ ಸಮಾಜದಲ್ಲಿದ್ದ ಕಂದಾಚಾರ ಮೂಢನಂಬಿಕೆ, ಜಾತೀಯತೆ, ಢಾಂಬಿಕತೆ, ಮೋಸ, ವಂಚನೆಗಳನ್ನು ದೂರಗೊಳಿಸಲು ಪ್ರಯತ್ನಿಸಿದರು.

ತ್ರಿವಿಧ ದಾಸೋಹದಿಂದ ಷಟಸ್ಥಲದ ಏಣಿಯನ್ನು ಏರಿ ಲಿಂಗಾಂಗ ಸಾಮರಸ್ಯದ ನಿಲುವಿಗೇರಿದ ಬಸವಣ್ಣನವರ ಸಾಮಾಜಿಕ ಮತ್ತು ಧಾರ್ಮಿಕ ವಿಚಾರಧಾರೆಗಳು, ಕಾಲ ದೇಶ ಹಂಗುಗಳನ್ನು ಹರಿದು ಸರ್ವತ್ರಮಾನ್ಯವಾಗಿ ಜೀವಂತಿಕೆಯನ್ನು ಪಡೆದಿದೆ. ಇಹಲೋಕದ ಜೀವನವನ್ನು ಸಾಧನೆಯ ಮಾರ್ಗಕ್ಕೆ ಆಳವಡಿಸಿಕೊಳ್ಳುವದೇ ಬಸವಣ್ಣನವರು ಬೋಧಿಸಿದ ಮುಖ್ಯ ತತ್ತ್ವ. ಅದಕ್ಕೆ ಜಾತಿ, ಮತ, ಉದ್ಯೋಗ, ವಯಸ್ಸು ಯಾವುದು ಅಡ್ಡಿಯಾಗಬಾರದು. ಅಂಥ ನೈತಿಕ ಜೀವನವನ್ನು, ಸಾಮಾಜಿಕ ಸಮತೆಯನ್ನು ಸಾಧಿಸುವ ಸಾಹಸ ಅವರದು.

**ಕೊಲುವನೆ ಮಾದಿಗನು,**
**ಹೊಲಸು ತಿಂಬುವನೆ ಹೊಲೆಯ,**
**ಕುಲವೇನೊ ಆವಂದಿರ ಕುಲವೇನೋ?**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ,**
**ನಮ್ಮ ಕೂಡಲಸಂಗನ ಶರಣರೇ ಕುಲಜರು.**

ಎಂದು ಶ್ರೇಷ್ಠ ಕುಲದ ಬಗ್ಗೆ ವ್ಯಾಖ್ಯಾನಿಸಿ ಜಾತಿಗೆ ಹೊಸ ಅರ್ಥವನ್ನು ತಂದು ಕೊಟ್ಟು, ನಿಜವಾದ ಕುಲಜರು ಯಾರೆಂಬುದನ್ನು ತಿಳಿಸುತ್ತಾ, ಅದರಂತೆ ಆಚರಣೆಗೂ ತಂದರು. ಹರಳಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಶಿವನಾಗಮಯ್ಯ ಮೊದಲಾದ ಅಸ್ಪೃಶರು ಬಸವತತ್ತ್ವದ ಆಶ್ರಯ ಪಡೆದು ಶರಣರಾದರು, ಅನುಭಾವಿಗಳಾದರು. 'ಜಂಗಮ ಸೇವೆಯೇ ಲಿಂಗ ಸೇವೆ' ಎಂಬ ದಿವ್ಯಭಾವದಿಂದ ನಡೆದುಕೊಂಡವರು.

ಬಸವಣ್ಣನವರು ಧರ್ಮಬೋಧನೆ ಆ ಕಾಲದ ಸ್ಥಿತಿಗತಿಗನುಗುಣವಾಗಿ ಅನೇಕ ಮಾರ್ಗಗಳಲ್ಲಿ ಪ್ರಸರಿಸಬೇಕಾಗಿತ್ತು. ಆಗ ಹೊಸದಾಗಿ ಲಿಂಗ ಧರಿಸಿದವರಿದ್ದು, ಅವರೆಲ್ಲಾ ನಾನಾ ಜಾತಿ ಧರ್ಮಗಳಿಂದ ಬಂದವರು. ಆದರೆ ಅವರು ವೀರಶೈವ ಧರ್ಮವನ್ನು ಮತ್ತೇ ಬಿಟ್ಟು ಹೋಗದಂತೆಯೂ, ಹಿಂದಿನಿಂದ ಬಂದ ದುರಾಚಾರಗಳನ್ನು ತ್ಯಜಿಸಿ ಶಿವಮಾರ್ಗವನ್ನು ಅನುಸರಿಸುವಂತೆಯೂ, ಲಿಂಗ ಧರಿಸಿದವರೆಲ್ಲರೂ ಒಂದೇ ಗುಂಪಿನವರೆಂದು ಎಲ್ಲರೂ ಪುರಸ್ಕರಿಸುವಂತೆಯೂ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ಕೆಲವರು ಹಿಂದಿನ ಸಂಬಂಧಗಳನ್ನು ಬಿಡಲಾಗದೇ ಸಂಕಟ ಪಡುತ್ತಿದ್ದರು, ಕೆಲವರು ವೀರಶೈವ ಮತವನ್ನು ಬಿಟ್ಟು ಹಿಂದಿನ ಜಾತಿ ಮತಗಳಿಗೆ

ಹಿಂದಿರುಗುತ್ತಿದ್ದರು. ಈ ಬಗೆಯ ಜನರ ಅನಿಶ್ಚಿತ ಬುದ್ಧಿ ಮತ್ತು ಅಧೈರ್ಯವನ್ನು ಕಂಡು ಬಸವಣ್ಣನವರಿಗೆ ತುಂಬಾ ನೋವಾಗಿರಬೇಕು. ಷಟ್ಸ್ಥಲ ಮಾರ್ಗವನ್ನು ಹಿಡಿದವರೆಲ್ಲ ಕೆಲವರು ಬ್ರಾಹಣ್ಮರು ಮತ್ತೇ ಭವಿಯೊಡನೆ ಸೇರದಿದ್ರೂ ಹಿಂದಿನ ವಿಪ್ರಕರ್ಮಗಳನ್ನು ಆಚರಿಸುತ್ತ ಎರಡು ಸಂಪ್ರದಾಯಗಳನ್ನು ಬೆರೆಸುತ್ತಿದ್ದರು. ಲಿಂಗವೊಂದು ಕಡೆ, ಜನಿವಾರ ಒಂದು ಕಡೆ, ಪ್ರಸಾದ ಒಂದು ಕಡೆ, ವಿಷಯಭೋಗ ಒಂದು ಕಡೆ ಇದನ್ನು ಕಂಡು ಬಸವಣ್ಣನವರಿಗೆ ದುಃಖವಾಗಿರಬೇಕು.

ಬಸವಣ್ಣ ಮೊದಲು ಬ್ರಾಹ್ಮಣನಾಗಿದ್ದು ವಿಪ್ರಕರ್ಮದಲ್ಲಿ ತಿರುಳನ್ನು ಕಾಣದೆ, ಶಿವಪಥವನ್ನು ಹಿಡಿದು ಕರ್ಮಬಂಧನದ ಬಿಡುಗಡೆಗೆ ಇದು ಉತ್ತಮ ಮಾರ್ಗವೆಂದು ಅರಿತು ಶಿವಪಥಕ್ಕೆ ಬಂದಿದ್ದನು. ಆದ್ದರಿಂದ ಅವನು ಸದಾಚಾರದಲ್ಲಿ ದುರಾಚಾರವನ್ನು ಬೆರೆಸದಂತೆ ವೀರಶೈವದ ಸರ್ವ ಸಮತಾಭಾವವನ್ನು ಆಚರಿಸುವಂತೆ ಬೋಧಿಸುತ್ತಿದ್ದನು. ಜಾತಿ ದೃಷ್ಟಿಯಿಂದ ಯಾರನ್ನು ಅಲ್ಲಗಳೆಯಬಾರದು. ಅದರಲ್ಲಿಯೂ ಅನೇಕರು ಶಿವಭಕ್ತರಿರುತ್ತಾರೆ. ತಮ್ಮ ಭಕ್ತಿ ಸದ್ಗುಣಗಳಿಂದ ಎಲ್ಲರೂ ವಂದನಾರ್ಹರು ಎಂಬುದೇ ಬಸವಣ್ಣನ ಆಶಯವಾಗಿತ್ತು. ಬಸವಣ್ಣನವರ ಸದಾಶಯದಿಂದ ಮಾನವ ಸಮಾಜದಲ್ಲಿ ಸಮತಾವಾದವು ನೆಲೆಯಾಗಿ ನಿಂತು ಅದರ ಪರಿಣಾಮವಾಗಿ ಎಂಥ ಕೊಳಕು ವ್ಯಕ್ತಿಯೂ ಲಿಂಗಭಕ್ತನಾದರೆ ಕುಲಜನೆನಿಸಿದನು. ಲಿಂಗ ಪೂಜಿಸುವವರೆಲ್ಲ ಒಂದೇ ಜಾತಿಯವರೆಂಬ ಭಾವನೆ ಸಮಾಜದಲ್ಲಿ ವ್ಯಾಪಿಸಿತು. ಲಿಂಗಪೂಜಕರು ಸದಾ ಪರಿಶುದ್ಧರಾಗಿ ಜಾತ್ಯಾತೀತರಾಗಿರುವದರಿಂದ ಅವರಲ್ಲಿ ಮೇಲು ಕೀಳೆಂಬ ಭಾವನೆ ಬರುವದಿಲ್ಲ. ಹೊಸದಾಗಿ ಲಿಂಗಧರಿಸಿದವರಿಗೂ, ಹಳೆಯ ಸಂಪ್ರದಾಯ ಬದ್ಧ ಲಿಂಗಧಾರಿಗಳಿಗೂ ಸಮತೆ, ಸಾಮರಸ್ಯಗಳನ್ನು ಕಲ್ಪಿಸಬೇಕಾಯಿತು. ಎಲ್ಲರ ಹೃದಯದಲ್ಲೂ ಈಶ್ವರನ ಚಿತ್ಕಳೇ ಒಂದೇ ವಿಧವಾಗಿ ನೆಲೆಸಿರುತ್ತದೆ. ಅದಕ್ಕೆ ಜಾತಿ, ಮತ, ಲಿಂಗಗಳ ಬೇಧವಿಲ್ಲ. ನಿರ್ಮಲ ಹೃದಯದಲ್ಲಿ ಸದ್ಭಕ್ತನಾದವನಿಗೆ ಮಾತ್ರವೇ ಅರಿವಿನ ಕಣ್ಣಿಗೆ ಕಾಣಿಸಬಲ್ಲದು. ಸರ್ವರನ್ನು ಆತ್ಮೀಯತೆಯಿಂದ ಪ್ರೀತಿಸುವದೇ ನಿತ್ಯಸುಖದ ಶಾಶ್ವತ ಮಾರ್ಗ, ಈ ಬಗೆಯ ದಿವ್ಯ ಆದರ್ಶವನ್ನು ಬಸವಣ್ಣನವರು ಜನತೆಗೆ ನೀಡಿರುವರು.

ಆಗಿನ ಕಾಲದಲ್ಲಿ ಜನರು ಶಿವಧರ್ಮವನ್ನು ಉತ್ಸಾಹದಿಂದ ಕೈಗೊಂಡಿದ್ದರೂ, ಒಂದೇ ಸಂಸಾರದಲ್ಲಿ ಗಂಡ ವೀರಶೈವ ದೀಕ್ಷೆಯನ್ನು ಪಡೆದು ಲಿಂಗಪೂಜೆಯಲ್ಲಿ ನಿರತನಾದರೆ, ಹೆಂಡತಿ ಅನ್ಯ ಕರ್ಮಾಚರಣೆಯಲ್ಲಿ ನಿರತಳಾಗಿರುವದು ಇಂತಹ ಅವ್ಯವಸ್ಥೆಯೂ ಸಮಾಜದಲ್ಲಿ ಉಂಟಾಯಿತು. ಒಂದೇ ಮನೆಯಲ್ಲಿ ಈ ರೀತಿ ನಡೆಯುತ್ತಿರುವಾಗ, ಶಿವನಿಗೆ ತೃಪ್ತಿಯಾಗದೆ ಅನ್ಯ ದೈವಕ್ಕೆ ಕೋಪ ಬಂದರೆ ಏನುಗತಿ ಎನ್ನುವ ಹೆದರಿಕೆಯೂ ಜನರಲ್ಲಿತ್ತು. ಅಂತವರಿಗೆ ಬಸವಣ್ಣನವರು

**ದೇವನೊಬ್ಬ ನಾಮ ಹಲವು,**
**ಪರಮ ಪತಿವ್ರತೆಗೆ ಗಂಡನೊಬ್ಬ,**
**ಮತ್ತೊಂದಲ್ಲೆರಗಿದರೆ ಕಿವಿ ಮೂಗ ಕೊಯ್ಯುವನು,**
**ಹಲವು ದೈವದ ಎಂಜಲ ತಿಂಬುವರನೇನೆಂಬೆ?**
**ಕೂಡಲ ಸಂಗಮದೇವ.**

ದೇವನೊಬ್ಬನೇ ವಿವಿಧ ರೂಪಗಳಿಂದ, ವಿವಿಧ ನಾಮಗಳಿಂದ ಪೂಜಿಸಿಕೊಳ್ಳುತ್ತಿರುವನು. ಎಲ್ಲಾ ಬಗೆಯ ಪೂಜೆ ಅವನಿಗೆ ಸಲ್ಲುತ್ತದೆ. ಅವನಿಂದಲೇ ಎಲ್ಲರ ರಕ್ಷಣೆಯೂ ಅಗುತ್ತಲಿರುವದು ಎಂದು ಸಮಾಧಾನದಿಂದ ತಿಳುವಳಿಕೆಯನ್ನು ಮೂಡಿಸುತ್ತ ಏಕವಾದವನ್ನು ಎತ್ತಿಹಿಡಿದಿರುವನು. ನಂಬಿದ ಹೆಂಡತಿಗೆ ಪತಿ ಒಬ್ಬನಲ್ಲದೆ, ಇಬ್ಬರಿಲ್ಲ, ಹಾಗೆಯೇ ನಂಬಿದ

ಭಕ್ತನಿಗೆ ಪ್ರಭು ಒಬ್ಬನಲ್ಲದೆ ಇಬ್ಬರಿಲ್ಲ. ಎಲ್ಲಾ ಆಕಾರಗಳಿಂದಲೂ ದೇವನೊಬ್ಬನೇ ಪೂಜಿಸಿಕೊಳ್ಳುತ್ತ ಭಕ್ತರನ್ನು ಅನುಗ್ರಹಿಸುತ್ತಿರುವನೆಂದು ತಿಳಿಸಿದನು.

ಈ ರೀತಿ ಸಮಾಜದ ವಿಭಿನ್ನ ಸ್ವಭಾವದ ಜನರಲ್ಲಿ ತಮ್ಮ ಮತ್ತು ದೇವರ ಬಗ್ಗೆ ಐಕ್ಯಮತವನ್ನು ಸ್ಥಾಪಿಸಿದ ಬಸವಣ್ಣನವರ ಆದರ್ಶವು ಚಿರಸ್ಮರಣೀಯವಾಗಿದೆ. ಧೈರ್ಯ ಸ್ಥೈರ್ಯಗಳು ಪ್ರಶಂಸಾರ್ಹವಾಗಿದೆ. ದೇಹ ಸಂಬಂಧವಾದ ಜಾತೀಯತೆಯನ್ನು ತೊಡೆದುಹಾಕಿ ಲಿಂಗಧಾರಿಗಳೆಲ್ಲರೂ ಒಂದೇ ಎಂದು ಭಾವಿಸಿದ್ದು "ಸರ್ವಂ ಶಿವಮಯಂ ಜಗತ್" ಎನ್ನುವ ಮಾತು ನಡೆ ನುಡಿಗಳಲ್ಲಿ ಹೊಂದಿಕೆಯಾಗಿತ್ತು. 'ಪರಮಾತ್ಮನು ಎಲ್ಲರ ಅಂತರಂಗದಲ್ಲಿ ಸಮಾನವಾಗಿ ನೆಲೆಸಿರುವನು. ಅವನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಮುಕ್ತಿಮಾರ್ಗ ಎಲ್ಲರಿಗೂ ಸುಲಭ'. ಎಂಬ ಆದರ್ಶವನ್ನು ಆಚರಿಸಿ ತೋರಿಸಿ ವರ್ಣ ವ್ಯತ್ಯಾಸವನ್ನು, ಅಸ್ಪೃಶತೆಯನ್ನು ಹೋಗಲಾಡಿಸಿದನು. ತಾನು ಬ್ರಾಹ್ಮಣನಾಗಿ ಹುಟ್ಟಿ ಜಾತಿ ಅಹಂಕಾರವನ್ನು ತೊರೆದು ಸಾಮಾನ್ಯ ಮಾನವನಂತೆ ಬಾಳಿ ಕೀಳುಜಾತಿಯವರನ್ನು ಉತ್ತಮರನ್ನಾಗಿ ಮಾಡಿ ಅವರಲ್ಲಿಯೂ ಸದಾಚಾರವನ್ನು ರೂಢಿಗೆ ತಂದನು. ಮಾನವರೆಲ್ಲರಿಗೂ 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಹೇಳುತ್ತಾ ಸದ್ವರ್ತನೆಯಿಂದ ಜಾತಿ ನಿರ್ಣಯವಾಗಬೇಕೇ ಹೊರತು, ಕೇವಲ ಹುಟ್ಟಿನಿಂದಲ್ಲ ಎನ್ನುವ ಸಿದ್ಧಾಂತವನ್ನು ಬೆಳಕಿಗೆ ತಂದನು.

ಬಸವಣ್ಣ ಮಾಡಿರುವ ಧರ್ಮಬೋಧನೆಯಲ್ಲಿ ದೀನರಕ್ಷಣೆಯೂ ಮತ್ತು ಆಪ್ತ ಹಿತೈಸಿಯ ಮರುಕವೂ ಕಂಡುಬರುತ್ತದೆ. ಅವನ ಪ್ರಕೃತಿ ಅಷ್ಟು ಕೋಮಲವೂ, ಮೃದುವೂ ಆಗಿರುವದರಿಂದ ಅವನ ಬೋಧನೆಯಲ್ಲಿ ಕಾಠಿಣ್ಯತೆ ಕಂಡುಬರುವದಿಲ್ಲ. ಭಕ್ತನು ಸತ್ಯ ಶುದ್ಧ ಕಾಯಕದಿಂದ, ನಿರಭಿಮಾನದಿಂದ ಲಿಂಗಾರ್ಪಣೆ ಮಾಡುತ್ತ ಲಿಂಗದೊಡನೆ ಪ್ರಸಾದವನ್ನು ಭೋಗಿಸುತ್ತ ನಿತ್ಯ ತೃಪ್ತನಾಗಿರಬೇಕೆಂಬುದೇ ಅಣ್ಣನ ಧರ್ಮಬೋಧನೆಯಾಗಿತ್ತು.

ಇನ್ನೂ ಸಾಮಾಜಿಕ ಸೇವೆಯನ್ನು ಕುರಿತು ಹೇಳುವದಾದರೆ ಜನಸಾಮಾನ್ಯರನ್ನು ಉದ್ದಾರ ಮಾಡುವ ಪವಿತ್ರ ಕಾರ್ಯದಲ್ಲಿ ತನ್ನ ಆತ್ಮಶಕ್ತಿಯನ್ನು ನಿರಭಿಮಾನದಿಂದ ಉಪಯೋಗಿಸಿರುವ ಬಸವಣ್ಣನವರ ಲೋಕಕಾರುಣ್ಯ ಅಪಾರವು, ಅದ್ಭುತವೂ ಆದುದು. ಬ್ರಹ್ಮಹತ್ಯೆ ಮೊದಲಾದ ಮಹಾಪಾಪ ಮಾಡಿದ ಪಾಪಿಗಳನ್ನು ತನ್ನ ಬೋಧನೆಯ ಮೂಲಕ ಶುದ್ಧಿಗೊಳಿಸಿದನು.

**"ಎಲವೋ,ಎಲವೋ ಪಾಪ ಕರ್ಮವ**
**ಮಾಡಿದವನೇ,**
**ಎಲವೋ ಎಲವೋ ಬ್ರಹ್ಮ ಹತ್ಯವ**
**ಮಾಡಿದವನೇ,**
**ಒಮ್ಮೆ ಶರಣೆನ್ನೆಲವೋ,**
**ಒಮ್ಮೆ ಶರಣೆಂದೊಡೆ ಪಾಪಕರ್ಮ ಓಡುವವು,**
**ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನಪರ್ವತಂಗಳೈದವು,**
**ಓರ್ವಂಗೆ ಶರಣೆನ್ನು; ನಮ್ಮ ಕೂಡಲ**
**ಸಂಗಮದೇವಂಗೆ!**

ಮಹಾದೇವನಿಗೆ ಶರಣೆಂದರೆ ಪಾಪಕರ್ಮವು ಕಳೆಯುವದು ಎನ್ನುವ ಧೃಢ ವಿಶ್ವಾಸವನ್ನು ಜನರಲ್ಲಿ ತುಂಬಿದನು. ಎಲ್ಲರೂ ಪರಮಾತ್ಮನಿಗೆ ಶರಣಾಗತರಾಗಿ, ಹೃದಯಶುದ್ಧಿ, ನಡೆ ನುಡಿಗಳ ಶುದ್ಧಿಯಿಂದ ನಡೆದುಕೊಂಡರೆ ಭಗವಂತನ ಅನುಗ್ರಹವನ್ನು ಪಡೆಯಬಹುದೆಂದು ತಿಳಿಸುತ್ತಾನೆ.

ಆ ಕಾಲದ ಜನರ ನಡೆನುಡಿಗಳಲ್ಲಿ ತಿದ್ದುಪಡಿಯೂ ಸಮಾಜ ಸುಧಾರಣೆಯೂ ಅಗಬೇಕೆಂದುಕೊಂಡ ಬಸವಣ್ಣನವರು,

**"ಲೋಕದ ಡೊಂಕ ನೀವೇಕೆ ತಿದ್ದುವಿರಿ?**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,**

**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ"**

ಎನ್ನುತ್ತಾ, ದೋಷಗಳನ್ನು ಮತ್ತು ಅವಿವೇಕಗಳನ್ನು ಸಹನೆ, ಶಾಂತಿಯಿಂದ ತಿದ್ದಲೂ ಆರಂಭಿಸಿದನು. ತ್ರಿಕರಣ ಶುದ್ಧರೂ, ಸಚ್ಚರಿತ್ರರೂ ಆದ ಜಂಗಮರು ಲೋಕದಲ್ಲಿ ಹೆಚ್ಚಬೇಕೆಂದು ಆಪೇಕ್ಷಿಸಿ, ಅವರಿಂದ ಧರ್ಮಪ್ರಚಾರವನ್ನು ಮಾಡಿಸುವ ಸಂಕಲ್ಪ ಮಾಡಿದನು. ಜಂಗಮವು ಚರಲಿಂಗವೆಂದೂ, ಪೂಜ್ಯವೆಂದು ತಿಳಿಸುತ್ತಾ, ಶಿವಾಗಮಗಳು ಹಿಂದಿನಿಂದಲೂ ಹೇಳಿಕೊಂಡು ಬಂದಿರುವದರಿಂದ ಜಂಗಮ ಆರಾಧನೆಯನ್ನು ಹೊಸದಾಗಿ ಕಲ್ಪಿಸಬೇಕಾಗಿರಲಿಲ್ಲ, ಆದರೆ ಸಾಮೂಹಿಕವಾಗಿ ಸಮಾಜವೆಲ್ಲವೂ ಗುರುಪೂಜೆ, ಲಿಂಗಧಾರಣೆ, ಜಂಗಮ ಆರಾಧನೆಯನ್ನು ನಿತ್ಯವೂ ಆಚರಿಸುವಂತೆ ಬಸವಣ್ಣ ಪ್ರಯತ್ನಪಟ್ಟು ಅದರಂತೆ ಜಯಶೀಲನೂ ಆದನು.

ದೇಹಕ್ಕೆ ಸ್ಥಿರಲಿಂಗದ ನಿತ್ಯಸಂಬಂಧವನ್ನು ಅದರ ಪ್ರಾಣಸ್ವರೂಪವಾದ ಚರಲಿಂಗವೆಂಬ ಜಂಗಮ ಪೂಜೆಯನ್ನು ಸಾರ್ವತ್ರಿಕವಾಗಿ ನಿತ್ಯ ಆಚರಣೆಗೆ ತಂದು ಅದರ ಮಹತ್ವವನ್ನು ಎತ್ತಿಹಿಡಿದನು, ತಾನು ಭಕ್ತನಾಗಿಯೇ ಉಳಿದು ಜಂಗಮಾರ್ಚನೆಯಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟನು. ಆದರೆ ಜಂಗಮರು ಜ್ಞಾನವಿಲ್ಲದೆ ಕೇವಲ ಲಾಂಛನಧಾರಿಗಳಾಗಿ, ತನ್ನ ಸ್ಥಿತಿಗತಿಯನ್ನು ಅರಿಯದೇ ಸಾಮಾನ್ಯರಂತೆ ಹೊನ್ನು,ಹೆಣ್ಣು, ಮಣ್ಣುಗಳ ವಿಷಯ ಸುಖಗಳನ್ನು ಅನುಭವಿಸುತ್ತಿದ್ದರೂ ಅವರನ್ನು ಅಣ್ಣ ಪೂಜಿಸಬೇಕಾಯಿತು, ಗೌರವಸಬೇಕಾಯಿತು. ಅಂಗದ ಮೇಲೆ ಲಿಂಗವುಳವರೆಲ್ಲ ಸಂಗಮನಾಥನೆಂದು ಗೌರವಿಸುವ ಬಸವಣ್ಣನವರು ಜನರಲ್ಲಿ ಎಷ್ಟೇ ಲೋಪದೋಷಗಳು ಕಂಡುಬಂದರೂ ಗಮನಿಸದೆ ಗೌರವಿಸುವ, ಅವರ ವರ್ತನೆಗಳನ್ನು ಸಾಧ್ಯವಾದ ಮಟ್ಟಿಗೆ ಸಹನೆ, ಸಮಾಧಾನಗಳಿಂದ ತಿದ್ದುವ ಗುರುತರವಾದ ಜವಾಬ್ದಾರಿಯನ್ನು ಹೊತ್ತುಕೊಂಡನು.

ಇಂತಹ ಸಮಾಜ ಸುಧಾರಣೆಯ ಸಂದರ್ಭದಲ್ಲಿ ಅನೇಕ ಕ್ಲೇಶಗಳು ಸಂಭವಿಸಿದರೂ ಸಮಾಧಾನದಿಂದ ಮೇಲು ಕೀಳೆಂಬ ತಾರತಮ್ಯ ಮಾಡದೇ ಎಲ್ಲರನ್ನು ತಿದ್ದುವ ಕೆಲಸ ಮಾಡಿದನು. ಲಿಂಗಧಾರಣೆ ಮಾಡಿಸಿಕೊಂಡವರೆಲ್ಲಾ ಶಿವನಪಥವನ್ನು ಹಿಡಿಯಲಿಲ್ಲ. ಶಿವಪಥವನ್ನು ಹಿಡಿದವರೆಲ್ಲಾ ಷಟ್ಸ್ಥಲ ಜ್ಞಾನಿಗಳಾಗಲಿಲ್ಲ, ಇಂಥ ಲಿಂಗಧಾರಿಗಳನ್ನು ಕಂಡು ಬಸವಣ್ಣ ವ್ಯಥೆ ಪಡುತ್ತಿದ್ದನು. ಇಂಥವರೆನೆಲ್ಲಾ ತಿದ್ದಿ ಶಿವ ಮಾರ್ಗದಲ್ಲಿ ನಡೆಯುವಂತೆ ಮಾಡುವ ಹೊಣೆಯೂ ಬಸವಣ್ಣನವರಿಗಿತ್ತು. ಜನರ ಮನಸ್ಸಿಗೆ ಮುಟ್ಟುವಂತೆ ಶಾಂತಿಯಿಂದ, ಸಮಾಧಾನದಿಂದ, ಉದ್ವೇಗ ಅವೇಶಗಳಿಲ್ಲದೆ ಧರ್ಮವನ್ನು ಬೋಧಿಸುವದರೊಂದಿಗೆ ಭಕ್ತರನ್ನು ಜಂಗಮರನ್ನು ತಿದ್ದುತ್ತಿದ್ದನು ಬಸವಣ್ಣನಿಗೆ ಮೃದುವಚನ ಸಕಲ ಜಪೊತಪವೂ ಆಗಿತ್ತು, ಸದುವಿನಯವೇ ಸದಾಶಿವನನ್ನು ಮೆಚ್ಚಿಸುವ ಸನ್ಮಾರ್ಗವಾಗಿತ್ತು. ದಯವೇ ಧರ್ಮದ ಮೂಲವೆಂದು ಹೇಳಿದ ಬಸವಣ್ಣ ಸಕಲ ಪ್ರಾಣಿಗಳಿಗೆ ಆತ್ಮೀಯ ಪ್ರೀತಿ, ದಯೇ ತೋರಿಸುವದೇ ಧರ್ಮವಾಗಿತ್ತು. ಹೀಗಾಗಿ ಹಿತಮಾರ್ಗವನ್ನು ತುಂಬಾ ಸಮಾಧಾನದಿಂದ ಜನತೆಗೆ ತಿಳಿಯಪಡಿಸಿದನು.

**"ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣಿಸ ಬೇಡ, ಇದಿರು ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ .ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗನಮದೇವನೊಲಿಸುವ ಪರಿ"**

**“ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ,**
**ಇಲ್ಲಿ ಸಲ್ಲುವರು, ಅಲ್ಲಿಯೂ ಸಲ್ಲುವರಯ್ಯ,**
**ಇಲ್ಲಿ ಸಲ್ಲದವರು, ಅಲ್ಲಿಯೂ ಸಲ್ಲರಯ್ಯಾ,**
**ಕೂಡಲ ಸಂಗಮದೇವ”**
**“ಏನು ಬಂದಿರಿ ಹದುಳವಿದಿರಿ ಎಂದರೆ,**
**ನಿಮ್ಮ ಮೈಸಿರಿ ಹಾರಿ ಹೋಹುದೆ?**
**ಕುಳ್ಳಿರೆಂದರೆ ನೆಲ ಕುಳಿ ಬೀಳುವದೆ?**
**ಒಡನೆ ನುಡಿದರೆ ಶಿರ ಹೋಟ್ಟೆಯೊಡೆವುದೆ,**
**ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,**
**ಕೆಡಹಿ ಮೂಗ ಕೊಯ್ಯದೇ ಮಾಣ್ಬನೆ ಕೂಡಲ ಸಂಗಮದೇವ.”**

ಹೀಗೆ ಹೇಳುವ ಬಸವಣ್ಣನವರ ಮಾತಿನಲ್ಲಿ ಕೋಪ ತಾಪಗಳಿಲ್ಲ, ಅಸೂಯೇ ಮಾತ್ಸರ್ಯಗಳಿಲ್ಲ. ಏನೇ ಬಂದರು ಸಮಾಧಾನದಿಂದ ಸಹಿಸಿಕೊಳ್ಳುವ ಉದಾರಭಾವ ಎದ್ದು ಕಾಣುತ್ತದೆ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಎನ್ನುವ ಈ ಮಾತು ಎಲ್ಲರಿಗೂ ಉತ್ತಮವಾದ ಆದರ್ಶವಾಗಿದೆ. ಲೋಕದಲ್ಲಿ ಬಾಳುವ ಪ್ರತಿಯೊಬ್ಬ ಮನುಷ್ಯನಿಗೂ ಪರಸ್ಪರ ಹೊಂದಾಣಿಕೆಯ ರೀತಿಯಲ್ಲಿ ವರ್ತಿಸುವ ಅವಶ್ಯಕತೆ ಅನಿವಾರ್ಯವೆನಿಸುತ್ತದೆ. ನಡೆ ನುಡಿಗಳಲ್ಲಿ ಒಬ್ಬರಿಗೊಬ್ಬರು ಅನುಕೂಲವಾಗಿ ವರ್ತಿಸುತ್ತ ಪ್ರೀತಿ ಗೌರವಗಳಿಂದ ನಡೆದುಕೊಂಡರೆ ಅವರಿಗೆ ಇಹ, ಪರ ಎರಡರಲ್ಲೂ ಸುಖ ಸಂತೋಷ ಲಭಿಸುತ್ತದೆ. ಆದರೆ ದ್ವೇಷ ಅಸೂಯೇಗಳಿಂದ ದೂಷಣೆ ಮಾಡಿದರೆ ಇಲ್ಲಿಯೂ ಸುಖ ಪಡದೆ, ಮುಂದೆಯೂ ದುಃಖವನ್ನೆ ಅನುಭವಿಸುವರು. ದೇಹ ಅನುಭವಿಸದೇ ಇರುವ ನಿತ್ಯ ಸುಖವೂ ಮುಂದೆ ಎಲ್ಲಿಯೂ ಸಿಗದೇ ಹೋಗುವದು. ಆದ್ದರಿಂದ ಐಹಿಕ ಜೀವನ ಆತ್ಮಕಲ್ಯಾಣಕ್ಕೆ ಅಮೋಘವೂ ಪವಿತ್ರವೂ ಆದ ಸದಾವಕಾಶ ಎನಿಸಿದೆ.

**ನುಡಿದರೆ ಮುತ್ತಿನ ಹಾರದಂತಿರಬೇಕು,**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,**
**ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು,**
**ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು,**
**ನುಡಿಯೊಳಗಾಗಿ ನಡೆಯದಿದ್ದಡೆ,**
**ಕೂಡಲ ಸಂಗಮದೇವನೆಂತೊಲಿವನಯ್ಯಾ.**

ಎಲ್ಲರೂ ನಯ ವಿನಯದಿಂದ ಮಾತುಗಳನ್ನಾಡುತ್ತ ಇದ್ದರೆ ಅಂತರಂಗದ ಶಿವನಿಗೆ ಮೆಚ್ಚುಗೆಯಾಗುವದೆಂದು ಇಂತಹ ಮೃದು ಭಾಷಿಗೆ ಲೋಕವು ಬೇಸರಿಸಿಕೊಳ್ಳುವದಿಲ್ಲ, ಇಂತ ವ್ಯಕ್ತಿ ಶುಭಕ್ಕೆ ಆಶಿಸದೆ, ಅಶುಭಕ್ಕೆ ದ್ವೇಷಿಸದೆ, ಸ್ತುತಿಗೆ ಸಂತೋಷಗೊಳ್ಳದೆ, ನಿಂದೆಗೆ ವ್ಯಸನಗೊಳ್ಳದೆ ಸಮಚಿತ್ತದಿಂದ ಲೋಕದಲ್ಲಿ ಬದುಕುತ್ತಾ ನೆರೆ ಹೊರೆಯವರ ಲೋಪ ದೋಷಗಳನ್ನು ಸಹನೆಯಿಂದ ತಿದ್ದುವ ಮೂಲಕ ಅವರ ಮೇಲ್ಮೆಯನ್ನು ಸಾಧಿಸುವದು ಸಾಧ್ಯ ಎಂದ ಬಸವಣ್ಣ ಈ ಬಗೆಯ ವರ್ತನೆಯಲ್ಲಿ ಲೋಕಕ್ಕೆ ಉತ್ತಮವಾದ ಆದರ್ಶವಾಗಿದ್ದಾನೆ.

ಶಿವದೀಕ್ಷೆಯನ್ನು ಹೊಂದಿ, ಶಿವವ್ರತವನ್ನು ಹಿಡಿದು ಕಷ್ಟ ಸಾಧನೆಯಲ್ಲಿ ನಡೆಯಲಾಗದೆ ತೊಂದರೆ ಅನುಭವಿಸುತ್ತಿದ್ದ ಜನರಿಗೆ ಬಸವಣ್ಣ ತುಂಬಾ ಸಹನೆ ಮತ್ತು ಮಮತೆಯನ್ನು ತೋರಿಸುತ್ತಿರುವದು ಅವರ ಸಹನೆಯ ಉನ್ನತ ಮಟ್ಟವನ್ನು ತಿಳಿಸುತ್ತದೆ.

**‘ನಿಧಾನವನರಸಿಹೆನೆಂದು ಹೋದರೆ ವಿಘ್ನ ಒಪ್ಪುದು ಮಾಬುದೇ,**
**ಸದಾಶಿವನೆಂದರೆ ಬೆದರಟ್ಟಿ ಸುಡುವುದು ಮಾಬುದೇ,**
**ಹದುಳಿಗನಾಗಿ ಉಳಿದರೆ ಅಮೃತದ ಪದವನೀವ ಕಾಣಾ ಕೂಡಲ ಸಂಗಮದೇವ’**

ಒಂದು ನಿಧಿಯನ್ನು ಹುಡುಕುತ್ತಾ ಹೋದರೆ ವಿಘ್ನ ಬಾರದೆ ಇರುವುದೆ? ಅದನ್ನು ಸಹಿಸಿಕೊಂಡು ಧೈರ್ಯದಿಂದ ಮುಂದೆ ನಡೆದರೆ ನಿಧಿ ಸಿಗುತ್ತದೆ. ಹಾಗೆಯೇ ಭಗವಂತನನ್ನು ಅನನ್ಯ ಭಕ್ತಿಯಿಂದ ನಂಬಿದರೆ ಎಲ್ಲ ಕಷ್ಟಗಳು ಪರಹಾರವಾಗುತ್ತವೆ ಎಂದು ಸಾಧಕರಿಗೆ ಧೈರ್ಯ ತುಂಬುತ್ತಿದ್ದನು.

ಆ ಕಾಲದಲ್ಲಿ ಜಂಗಮರು ನಾವು ಮಾಹೇಶ್ವರ ಸ್ಥಲದವರು, ನಾವು ಶರಣ ಸ್ಥಲದವರು, ನಾವು ಷಟ್‌ಸ್ಥಲ ಬ್ರಹ್ಮಿಗಳು ಎಂದು ಅಜ್ಞಾನದಿಂದ ಹೇಳುತ್ತಾ ಪ್ರತಿಷ್ಠಾಕಾಂಕ್ಷಿಗಳಾಗಿದ್ದರು. ಷಟ್‌ಸ್ಥಲ ಮಾರ್ಗ ಅನುಭವಿಗಳಿಗೆ ಮಾತ್ರ ಸಾಧ್ಯವಾಗುವಂತಹದ್ದು. ಅದರಲ್ಲಿ ಆದಿಯಲ್ಲಿ ದ್ವೈತವೂ, ಮಧ್ಯದಲ್ಲಿ ವಿಶೀಷ್ಟಾದ್ವೈತವೂ, ಕೊನೆಯಲ್ಲಿ ಅದ್ವೈತವೂ ಉಂಟು. ಈ ಮಾರ್ಗವು ಜೀವನ ಆತ್ಮವಿಕಾಸದಲ್ಲಿ ಆರು ಹಂತಗಳುಳ್ಳದ್ದು. ಅದು ಬರಿ ಬಾಯಿ ಮಾತಿನಿಂದ ಹೇಳುವ ವಿಷಯವಲ್ಲ. ಆಚರಣೆಯಿಂದ ಮಾತ್ರ ಅನುಭವಕ್ಕೆ ಗೋಚರವಾಗುವಂತದ್ದು. ಗುರುವಿಗೆ ಕಿಂಕರನಾಗಿ ನಡುಗುತ್ತಾ ಅವನ ಸೇವೆಯಲ್ಲಿ ತೊಡಗುವ ಸದ್ಭಕ್ತನಿಗೆ ಮಾತ್ರ ಷಟ್‌ಸ್ಥಲ ಆಚರಣೆ ಸಾಧ್ಯವಾಗುವದು. ಹುಟ್ಟಿನಲ್ಲಿ ಜಂಗಮನೆಂದು ಹೇಳಿದ ಮಾತ್ರಕ್ಕೆ ಇದರ ಆಚರಣೆ ಅಳವಡುವದಿಲ್ಲ. ಇದಕ್ಕೆ ನಿರಹಂಕಾರ, ನಿರಭಿಮಾನಗಳು ಅವಶ್ಯ. ಜಂಗಮನೂ ಸಹ ಅಹಂಕಾರ, ಅಭಿಮಾನಗಳಿಗೆ ವಶನಾಗದಂತೆ ಜಾಗೃತನಗಿರುವಂತೆ, ಎದುರಿಗೆ ಇರುವವನನ್ನು ಶಿವನೆಂದು ವಂದಿಸಿ ಭಕ್ತಿಯಿಂದ ಸೇವೆ ಮಾಡಲೇಬೇಕೆಂದು ತಿಳಿಸಿದನು.

ಜಂಗಮರಾಗಲೀ, ಭಕ್ತರಾಗಲೀ ಎಲ್ಲರಿಗೂ ಅಹಂಕಾರ ಗರ್ವಗಳನ್ನು ತೊರೆದು ಸದಾಚಾರ, ಸದ್ವರ್ತನೆಗಳಿಂದ ಬಾಳುವಂತಹ ದಿವ್ಯ ಆದರ್ಶವನ್ನು ಬಸವಣ್ಣ ತಿಳಿಸಿದನು. ಈ ರೀತಿ ನಯವಾಗಿ ಬುದ್ಧಿ ಕಲಿಸುವದನ್ನು ಜಂಗಮರು ಸಹಿಸಿದಂತೆ ಕಾಣುವದಿಲ್ಲ. ಆಗಲೂ ಬಸವಣ್ಣನವರು ಕೋಪಿಸಿಕೊಳ್ಳದೆ ಅವರನ್ನು ಸಮಾಧಾನ ಪಡಿಸುತ್ತಾ ಸನ್ಮಾರ್ಗದಲ್ಲಿ ವ್ಯವಹರಿಸುವಂತೆ ಪ್ರೇರೆಪಿಸುತ್ತಿದ್ದನು. ಲಿಂಗಭಕ್ತನಾದವನು ಲಿಂಗಪಥವನ್ನು ಹೇಳಿದರೆ ಕೋಪಿಸಿಕೊಳ್ಳಬಾರದು. ಹಾಗೇ ಕೋಪಿಸುವವರನ್ನು ಲಿಂಗದೇವ ಮೆಚ್ಚುವದಿಲ್ಲ. ಹೀಗೆ ಸಮಾಧಾನದ ಮಾತುಗಳ ಮೂಲಕ ಅವರ ಮನಸ್ಸನ್ನು ತನ್ನ ಕಡೆ ಸೆಳೆದುಕೊಂಡನು.

ಬಸವಣ್ಣನವರು ಭಕ್ತಿಯಿಂದ ಗುರು ಲಿಂಗ ಜಂಗಮರನ್ನು ಸಾಕ್ಷಾತ ಲಿಂಗವೆಂದು ನಂಬಿ, ಅವರನ್ನು ಉದ್ಧರಿಸಿ, ತಾನೂ ಉದ್ಧಾರನಾದನು. ನಿರಂತರವೂ ಶಿವನ ಸೇವೆ, ಗುರು ಲಿಂಗ ಜಂಗಮರ ಪೂಜೆಯೇ ಉಸಿರೆಂದುಕೊಂಡನು. ಸರ್ವರನ್ನು ಶಿವಭಾವನೆಯಿಂದ ಪ್ರೀತಿಸುವದೇ ನಮ್ಮ ಕಾಯಕವೆಂದು ಅದನ್ನು ಸಂತೋಷದಿಂದ ನಿರ್ವಹಿಸುವದೇ ನಮ್ಮ ಧರ್ಮ ಮತ್ತು ಕರ್ತವ್ಯ. ಅದರ ಫಲಾಫಲಗಳು ಶಿವನಿಗೆ ಸೇರಿದವುಗಳೆಂದು, ಹೀಗೆ ಬಸವಣ್ಣನು ಆಚರಿಸಿ ತೋರಿಸಿ ಅದರಂತೆ ನಡೆದುಕೊಳ್ಳಲು ಸಮಾಜದ ಜನರಿಗೆ ತಿಳಿಸಿದನು.

**********

**ಪರಾಮರ್ಶನ ಗ್ರಂಥಗಳು:**

1. ಅಣ್ಣನ ಆದರ್ಶ–ಡಾ.ಟಿ.ಜಿ.ಸಿದ್ಧಪ್ಪಾರಾಧ್ಯ.
2. ಶರಣ ಜಗತ್ತು–ಸಂ. ವಿದ್ವಾನ್ ಎಂ ಶಿವಕುಮಾರ ಸ್ವಾಮಿ
3. ಬಸವ ಚಳುವಳಿ–ಲಿಂಗಣ್ಣ ಸಂತ್ಯಂಪೇಟೆ.
4. ಭವದ ಬೀಜ–ದೊಡ್ಡಬಸಪ್ಪ ಬಳೂರಗಿ.